ಗಾಂಧೀಜಿ... ಹೀಗೆ ಕಾಲಕಾಲದ ವಿಮೋಚನೆಯ ಗುರುಗಳೆಲ್ಲರೂ ಬೆರೆತಿದ್ದಾರೆ. ಅವರ ಸರ್ವಸ್ವೀಕಾರ (ಇನ್‌ಕ್ಲೂಸೀವ್) ವ್ಯಕ್ತಿತ್ವದಲ್ಲೂ ಈ ಎಲ್ಲರೂ ಬೆರೆತಿದ್ದರು. ಸಾಮಾನ್ಯವಾಗಿ ತಮ್ಮನ್ನು ಭೇಟಿಯಾದ ಎಲ್ಲರನ್ನೂ ಕಂಫರ್ಟಬಲ್ ಆಗಿಡುವ ಅದ್ಭುತ ಗುಣವೂ ಈ ವ್ಯಕ್ತಿತ್ವದಲ್ಲಿತ್ತು.

## ಅತಿ ಸಾರ್ವಜನಿಕತೆಯ ಸವಾಲುಗಳು

ಸಾಹಿತ್ಯ, ರಾಜಕೀಯ, ಚಳವಳಿ, ಸಿನಿಮಾ ಮುಂತಾಗಿ ಹಲವು ವಲಯಗಳ ನಂಟಿನಿಂದ ಹುಟ್ಟಿದ ಜನಪ್ರಿಯತೆ ಹಾಗೂ ಅತಿಯಾದ ಸಾರ್ವಜನಿಕ ಗಮನ ಈಚಿನ ವರ್ಷಗಳಲ್ಲಿ ಸಿದ್ಧಲಿಂಗಯ್ಯನವರ ಭಾಷಣ, ಬರಹ, ಹೇಳಿಕೆಗಳ ಸ್ವರೂಪವನ್ನು ಬದಲಿಸತೊಡಗಿತು. ದೊಡ್ಡ ದೊಡ್ಡ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಈ ಹಿಂದೆ ಅವರು ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ವೇದಿಕೆಗಳಲ್ಲಿ ನೇರ ಮಾತು, ನಿಖರ ನಿಲುವುಗಳ ಮೂಲಕ, ಅಥವಾ ಬರಹಗಳ ಮೂಲಕ ಜನರನ್ನು ತಲುಪಿದಾಗ ಪಡೆದ ಜನಪ್ರಿಯತೆ ಹಾಗೂ ಆ ಜನಪ್ರಿಯತೆಯಿಂದಾಗಿ ಅವರು ಅಸಂಖ್ಯಾತ ಜನರನ್ನು ತಲುಪಿದ್ದು ಎಲ್ಲರಿಗೂ ಗೊತ್ತಿದೆ. ಆದರೆ, ಅನಂತರದ ಸಿದ್ಧಲಿಂಗಯ್ಯನವರ ಬರಹಗಳು, ಭಾಷಣಗಳಲ್ಲಿ ಎಲ್ಲರಿಗೂ ಪ್ರಿಯವಾಗಬಲ್ಲ ನುಡಿಗಟ್ಟಿಗೆ ಒಗ್ಗಿಕೊಳ್ಳಬೇಕಾದ ಒತ್ತಡವೊಂದು ಅವರ ಒಳಗೂ, ಹೊರಗೂ ಸೃಷ್ಟಿಯಾದಂತಿದೆ. ಇದು ಪಬ್ಲಿಕ್ ರಿಲೇಶನ್ ಭಾಷೆ ವಿಜೃಂಭಿಸಿದ ಕಾಲದ ವಿದ್ಯಮಾನವೂ ಹೌದು. ಇಂಥ ಕಾಲಘಟ್ಟಗಳಲ್ಲಿ ಸೂಕ್ಷ್ಮ ಲೇಖಕನೊಬ್ಬ ನಿಜಕ್ಕೂ ತನ್ನೊಳಗಿಗೆ ಹತ್ತಿರವಿರುವ ಕೆಲವೇ ಮಾತುಗಳನ್ನಾಡಿ, ತನ್ನ ವ್ಯಕ್ತಿತ್ವದ ಸಮಗ್ರತೆಯನ್ನು, ಅದಕ್ಕಿಂತ ಮುಖ್ಯವಾಗಿ ಸತ್ಯಬದ್ಧತೆಯನ್ನು, ಕಾಪಾಡಿಕೊಳ್ಳಬೇಕಾದ ಸವಾಲಿರುತ್ತದೆ. ಎಷ್ಟೋ ಸಲ ಸಾರ್ವಜನಿಕ ಸಭೆಗಳಲ್ಲಿ ಗಣ್ಯರ ಮೇಲೆ ಸಿದ್ಧಲಿಂಗಯ್ಯನವರು ಸುರಿಸುತ್ತಿದ್ದ ಅತಿ ಹೊಗಳಿಕೆ, ಉತ್ಪ್ರೇಕ್ಷಾಲಂಕಾರಗಳು ಸೂಕ್ಷ್ಮ ಕೇಳುಗರಲ್ಲಿ ಕಿರಿಕಿರಿ ಹುಟ್ಟಿಸತೊಡಗಿದವು.

ನಿಜಕ್ಕೂ ವಿಚಿತ್ರವೆಂದರೆ, ಸಿದ್ಧಲಿಂಗಯ್ಯನವರಿಗೆ ಎಲ್ಲ ಬಗೆಯ ವಲಯಗಳ ಸ್ವೀಕಾರ ಎಷ್ಟೊಂದು ಸಿಕ್ಕಿತ್ತೆಂದರೆ, ಅವರು ಯಾರನ್ನೂ ಸಂತೃಪ್ತಗೊಳಿಸುವಂತೆ ಮಾತಾಡಬೇಕಾದ ಅಗತ್ಯವೇ ಇರಲಿಲ್ಲ. ಸುಮ್ಮನೆ ತಾವು ಕಂಡ ವಾಸ್ತವಗಳನ್ನು, ಸತ್ಯಗಳನ್ನು ಹೇಳಿದ್ದರೂ ಸಾಕು, ಅದನ್ನು ಕೇಳಿಸಿಕೊಳ್ಳುವ ಸಾವಿರಾರು ಜನರಿದ್ದರು; ಅವರ ಚಿಂತನೆಗಳನ್ನು ಹಬ್ಬಿಸಬಲ್ಲ ಹೊಸ ತಲೆಮಾರಿನ ನಿಷ್ಠುರ ಹುಡುಗಿಯರು, ಹುಡುಗರು, ಚಳವಳಿಗಳ ಕಾರ್ಯಕರ್ತರಿದ್ದರು. ಆದ್ದರಿಂದಲೇ ಅವರು ಓಲೈಕೆಯ ಮಾತಾಡಿದಾಗ ಸೂಕ್ಷ್ಮ ಮನಸ್ಸಿನ ಕಿರಿಯರು ಅವರನ್ನು ಕಟುವಾಗಿ, ಒಮ್ಮೊಮ್ಮೆ ಅನಗತ್ಯವಾಗಿ ಕ್ರೂರವಾಗಿ ಟೀಕಿಸುತ್ತಿದ್ದರು. ಹಿರಿಯರು ಗೊಣಗಿ ಸುಮ್ಮನಾಗುತ್ತಿದ್ದರು.

ಇಷ್ಟಾಗಿಯೂ ಆ ಟೀಕೆಗಳನ್ನು ಸದಾ ಸಹಿಸುತ್ತಾ ಬಂದ ಸಿದ್ಧಲಿಂಗಯ್ಯನವರ ಡೆಮಾಕ್ರಟಿಕ್ ಗುಣವನ್ನೂ ನಾವು ಮರೆಯಬಾರದು. ಕೆಲ ಬಗೆಯ ಲೇಖಕರು ಆಳುವವರನ್ನು ಗುಟ್ಟಾಗಿ ಓಲೈಸಿ ಸಣ್ಣಪುಟ್ಟ ಸವಲತ್ತುಗಳನ್ನು ಪಡೆಯುವ ರೀತಿಗೆ ಹೋಲಿಸಿದರೆ, ಸಿದ್ಧಲಿಂಗಯ್ಯನವರ ನೇರ ಓಲೈಕೆ ಸಾರ್ವಜನಿಕ ವಲಯಕ್ಕೂ ಪರಿಚಿತವಾಗಿತ್ತು ಎಂಬುದನ್ನೂ ಗಮನಿಸಬೇಕು. ಅದೇನೇ ಇದ್ದರೂ, ಎಂಥ ನಿಷ್ಠುರ ಟೀಕೆಗಳ ಸಂದರ್ಭದಲ್ಲೂ ಅವರನ್ನು ಸಮರ್ಥಿಸಬಲ್ಲ ಅಭಿಮಾನಿಗಳೂ ಅವರಿಗಿದ್ದರು. ಅಂಥ ಅಭಿಮಾನಿಗಳಿಗೂ 2018ರ ರಾಜ್ಯ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕೇಂದ್ರ ಗೃಹಮಂತ್ರಿಗಳು ಸಿದ್ಧಲಿಂಗಯ್ಯನವರ ಮನೆಗೆ 'ಸೌಜನ್ಯಯುತ' ಭೇಟಿ ಕೊಟ್ಟಿದ್ದನ್ನು ಸಮರ್ಥಿಸಿಕೊಳ್ಳುವುದು ಕಷ್ಟವಾಗಿತ್ತು. ಈ ಘಟನೆಯಿಂದೀಚೆಗೆ ಪ್ರಗತಿಪರ ವಲಯದಲ್ಲಿ ಸಿದ್ಧಲಿಂಗಯ್ಯನವರ ಸ್ವೀಕಾರಾರ್ಹತೆ ಕ್ಷಿಪ್ರವಾಗಿ ಕುಸಿಯತೊಡಗಿತು.

ಈ ಥರದ ಬೆಳವಣಿಗೆಗಳಿಗೆ ತನ್ನ ನಡೆನುಡಿಗಳೂ ಕಾರಣವೆಂದು ಬಲ್ಲ ಕವಿಯ ಒಳಲೋಕ